**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**-444/2022 **PW**-1

**ದಿಃ 24.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಡಿ ಡಿ ಡಬ್ಲು ವಕೀಲರಿಂದಃ**

**1.** ನನ್ನ ತಂದೆ ದಿನಾಂಕಃ18.03.1989 ರಂದು ಮರಣ ಹೊಂದಿರುತ್ತಾರೆ. ನನ್ನ ತಂದೆ ತೀರಿಕೊಳ್ಳುವ ಮೊದಲು ನನ್ನದಾಗಲಿ ಅಥವಾ 1 ನೇ ವಾದಿಯದಾಗಲಿ ಮದುವೆಯಾಗಿರಲಿಲ್ಲ ಎಂದರೆ ಸರಿ. 1 ನೇ ವಾದಿ ಮದುವೆ ಯಾವಾಗ ಆಯಿತು ಎಂದರೆ ಸಾಕ್ಷಿ 1996 ರಲ್ಲಿ ಆಗಿರುತ್ತದೆ. ದಿನಾಂಕಃ12.02.2008 ರಂದು ನನ್ನ ಮದುವೆ ನಡೆದಿರುತ್ತದೆ. ನಮ್ಮ ಮದುವೆಯ ಖರ್ಚುಗಳನ್ನು ನಮ್ಮ ಅಣ್ಣತಮ್ಮಂದಿರು ಕೂಡಿ ಮಾಡಿರುತ್ತಾರೆಂದರೆ ಮದುವೆ ಗಂಡನ ಮನೆಯಲ್ಲಿ ನಡೆದಿರುತ್ತದೆ ಆದರೆ ಖರ್ಚು ವೆಚ್ಚಗಳನ್ನು ಅಣ್ಣ ತಮ್ಮಂದಿರು ಮಾಡಬೇಕಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು 1 ರಿಂದ 3 ನನ್ನ ತಂದೆ ಸಂಪಾದನೆ ಮಾಡಿದ ಆಸ್ತಿಗಳೆಂದರೆ ಸರಿ. 4 ಮತ್ತು 5 ನೇ ಆಸ್ತಿ ಪ್ರತಿವಾದಿ 2 ಮತ್ತು 3 ರವರು ಸ್ವಂತ ಗಳಿಸಿದ ಆಸ್ತಿಗಳೆಂದರೆ ಸಾಕ್ಷಿ ನನ್ನ ತಂದೆಯ ಆಸ್ತಿಗಳಿಂದ ಬರುತ್ತಿದ್ದ ಬಾಡಿಗೆಯಿಂದ ಅವರು ಈ ಎರಡೂ ಆಸ್ತಿಗಳನ್ನು ತೆಗೆದುಕೊಂಡಿರುತ್ತಾರೆ ಅವರಿಗೆ ಯಾವ ದುಡಿಮೆ ಇಲ್ಲ ಎಂದು ನುಡಿಯುತ್ತಾರೆ. ನಾನು ಕೇಸಗೆ ಅನುಕೂಲವಾಗಲಿ ಎಂದು ಪ್ರತಿವಾದಿ 2 ಮತ್ತು 3 ರವರಿಗೆ ಯಾವದೇ ದುಡಿಮೆ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿ 2 ಮತ್ತು 3 ರವರ ಮದುವೆಯಾಗಿದೆ ಎಂದರೆ ಸರಿ. ಸದರಿಯವರು ದುಡಿಯುತ್ತಾರೆಂಬ ಕಾರಣಕ್ಕೆ ಅವರಿಗೆ ಹೆಣ್ಣು ಕೊಟ್ಟಿರುತ್ತಾರೆಂದರೆ ಸಾಕ್ಷಿ ಮೊದಲು ಅವರು ಅಂಗಡಿ ಇಟ್ಟಿದ್ದರು. ದಾವಾ ಆಸ್ತಿ 1 ರಲ್ಲಿ ಕಟ್ಟಡ ಕಟ್ಟುವ ಸಮಯದಲ್ಲಿ ನನ್ನ ತಂದೆ ಮರಣ ಹೊಂದಿದರು ಎಂದರೆ ಸರಿ. ಆ ಸಮಯದಲ್ಲಿ ನನ್ನ ಸಂಬಂದಿಕರಾದ ಎಂ ಎಂ ಮೇಹರವಾಡೆ ಇವರು ಆ ಕಟ್ಟಡವನ್ನು ಸಂಪೂರ್ಣಗೊಳಿಸಿದರು ಎಂದರೆ ಸರಿ. ಸದರಿ ಕಟ್ಟಡವನ್ನು ಪ್ರತಿವಾದಿ 2 ಮತ್ತು 3 ರವರು ತಮ್ಮ ಹಣದಿಂದ ಪೂರ್ಣಗೊಳಿಸಿರುತ್ತಾರೆಂದರೆ ಸಾಕ್ಷಿ ಅದನ್ನು ನನ್ನ ಮಾವ ಎಂ ಎಂ ಮೇಹರವಾಡೆ ಇವರು ಸಂಪೂರ್ಣಗೊಳಿಸಿ ಆ ನಂತರ ಪ್ರತಿವಾದಿ 2 ಮತ್ತು 3 ರವರ ಕಡೆ ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ಸದರಿ ಮೇಹರವಾಡೆ ಇವರ ವ್ಯವಹಾರ ನಿಮ್ಮ

ಸಮಕ್ಷಮ ಆಗಿತ್ತಾ ಎಂದರೆ ಸಾಕ್ಷಿ ನಮ್ಮ ಸಮಕ್ಷಮ ಆಗಿಲ್ಲ ಆದರೆ ನನಗೆ ಗೊತ್ತಿತ್ತು ನಾವು ಹೋಗುವದು ಬರುವದು ಮಾಡುತ್ತಿದ್ದೆವು ಎನ್ನುತ್ತಾರೆ. ಪ್ರತಿವಾತಿ 2 ಮತ್ತು 3 ರವರು ದುಡಿಯುತ್ತಿದ್ದರು ಹಾಗೂ ರಿಯಲ ಎಸ್ಟೇಟ ದಂದೆ ಮಾಡುತ್ತಿದ್ದರು ಈಗಿದ್ದರೂ ಕೂಡಾ ನಾನು ಅವರು ದುಡಿಯುತ್ತಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಆನಲೈನ ಸಾರೀ ಬಿಜಿನೆಸ ಮಾಡುತ್ತೇನೆ. 1ನೇ ವಾದಿ ಗೃಹಿಣಿ ಇರುತ್ತಾರೆ. ನಾನು ಉದ್ಯೋಗ ಮಾಡುತ್ತಿದ್ದ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ದಾಖಲೆ ಹಾಜರುಪಡಿಸಿಲ್ಲ ಎನ್ನುತ್ತಾರೆ. ಎಂ ಎಂ ಮೇಹರವಾಡೆ ರವರು ಆ ಕಟ್ಟಡ ಕಟ್ಟಲು ಸುಮಾರು 25 ರಿಂದ 30 ಲಕ್ಷ ಖರ್ಚು ಮಾಡಿರಬಹುದು ಎಂದರೆ ಸಾಕ್ಷಿ ಮಾಡಿರಬಹುದು ಎನ್ನುತ್ತಾರೆ. ಸದರಿ25 ರಿಂದ 30 ಲಕ್ಷ ಸಾಲ ಇನ್ನೂವರೆಗೆ ಮುಟ್ಟಿಲ್ಲ ಎಂದರೆ ಸಾಕ್ಷಿ ಅದು ಆಗಲೇ ಮುಟ್ಟಿರುತ್ತದೆ ಮುಟ್ಟಿದ ಮೇಲೆ ಪ್ರತಿವಾದಿ 2 ಮತ್ತು 3 ರವರಿಗೆ ಕಟ್ಟಡ ಬಿಟ್ಟುಕೊಟ್ಟಿದ್ದಾರೆಂದು ಸಾಕ್ಷಿ ನುಡಿಯುತ್ತಾರೆ. ನಾನು ಈಗ ಹೇಳಿರುವದು ಎಲ್ಲವೂ ಸುಳ್ಳು ಎಂದರೆ ಸರಿಯಲ್ಲ.

2. ನನ್ನ ತಾಯಿಯವರಿಗೆ ವಯಸ್ಸಾಗಿದ್ದು ಆರೋಗ್ಯ ಹದಗೆಟ್ಟಿದೆ ಎಂದರೆ ಸಾಕ್ಷಿ ಅವರು ಆರಾಮಾವಾಗಿಯೇ ಇದ್ದಾರೆ ಎನ್ನುತ್ತಾರೆ. ಸದರಿಯವರಿಗೆ ತಿಂಗಳು 20 ರಿಂದ 30 ಸಾವಿರ ರೂ ಆಸ್ಪತ್ರೆ ಖರ್ಚು ಆಗುತ್ತದೆಂದರೆ ಸಾಕ್ಷಿ ಅಷ್ಟು ಆಗುವದಿಲ್ಲ 5 ರಿಂದ 6 ಸಾವಿರದಷ್ಟು ಬರಹುದು ಎನ್ನುತ್ತಾರೆ. ನನ್ನ ತಾಯಿಯನ್ನು ಎಲ್ಲೆಲ್ಲಿ ಯಾವ ಯಾವ ಆಸ್ಪತ್ರೆಗೆ ತೋರಿಸಿದ್ದಾರೆಂದು ಮಾಹಿತಿ ಇದೆಯಾ ಎಂದರೆ ಸಾಕ್ಷಿ ನನಗೆ ಮಾಹಿತಿ ಇದೆ ಎನ್ನುತ್ತಾರೆ. ನೀನಿವು ಯಾವಾಗಲಾದರೂ ನಿಮ್ಮ ತಾಯಿಯನ್ನು ಆಸ್ಪತ್ರೆಗೆ ತೋರಿಸಿದ್ದೀರಾ ಎಂದರೆ ಸಾಕ್ಷಿ ನನ್ನ ಅಣ್ಣಂದಿರೇ ನೋಡಿಕೊಳ್ಳುತ್ತಾರೆ ಹಾಗೂ ಬಾಡಿಗೆ ಕೂಡಾ ತೆಗೆದುಕೊಳ್ಳುತ್ತಾರೆಂದು ಸಾಕ್ಷಿ ನುಡಿಯುತ್ತಾರೆ. ನನ್ನ ತಂದೆಯ ಜೀವಿತ ಕಾಲದಲ್ಲಿ ಸದರಿಯವರು ತಮ್ಮ ಸ್ವಂತ ಗಳಿಸಿದ ಆಸ್ತಿಯ ಮೇಲೆ ಮೃತ್ಯು ಪತ್ರ ಬರೆದಿಟ್ಟಿದ್ದಾರೇಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ವಿಷಯ ಗೊತ್ತಿದ್ದರೂ ಕೂಡಾ ನಾನು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ದಾವಾವನ್ನು ಸುಳ್ಳು ಮಾಹಿತಿ ಕೊಟ್ಟು ಸುಳ್ಳು ದಾಖಲೆ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಪ್ರತಿವಾದಿ 2 ಮತ್ತು 3 ರವರು ತಾವು ದುಡಿದು ಸ್ವಂತ ಗಳಿಸಿದ ಆಸ್ತಿ ಸಂಖ್ಯೆ 4 ಮತ್ತು 5 ಎಂದರೆ ಸಾಕ್ಷಿ ಅದು ಸರಿಯಲ್ಲ ಎನ್ನುತ್ತಾರೆ. ಸದರಿಯವರು ಬಾಡಿಗೆದಿಂದ ಆಸ್ತಿಯನ್ನು ತೆಗೆದುಕೊಂಡಿದ್ದಾರೆಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ದಾಖಲೆ ಹಾಜರುಪಡಿಸಿಲ್ಲ ಎನ್ನುತ್ತಾರೆ. ನನ್ನ ತಂದೆ ಮತ್ತು ತಾಯಿಯನ್ನು ನನ್ನ ಅಣ್ಣಂದಿರೇ ಚೆನ್ನಾಗಿ ನೋಡಿಕೊಂಡಿರುತ್ತಾರೆಂದರೆ ಸಾಕ್ಷಿ ನನ್ನ ತಂದೇ ಮರಣ ಹೊಂದಿದಾಗ ನಾನು 6 ವರ್ಷದವಳು ಇದ್ದೆ, ನನ್ನ ಅಕ್ಕ 11 ವರ್ಷದವಳು ಇದ್ದಳು. ನನ್ನ ತಂದೆ ಮೊದಲೇ ತೀರಿಕೊಂಡಿದ್ದರು ಆದರೆ ನನ್ನ ತಾಯಿ ಈಗ ಚೆನ್ನಾಗಿರುತ್ತಾರೆಂದು ಸಾಕ್ಷಿ ನುಡಿಯುತ್ತಾರೆ. ಎಂ ಎಂ ಮೇಹರವಾಡೆ ಇವರ ಸಾಲವನ್ನು

ನೀವು ತೀರಿಸಿಲ್ಲ  ಎಂದರೆ ಸಾಕ್ಷಿ ನಾವು ತೀರಿಸಿಲ್ಲ ಆದರೆ ಬಾಡಿಗೆ ತೆಗೆದುಕೊಂಡಿದ್ದಾರೆಂದು ಸಾಕ್ಷಿ ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ನನಗೆ ಯಾವದೇ ಹಿಸ್ಸಾ ಇಲ್ಲ ಎಂದು ಸುಳ್ಳು ಕೇಸು ದಾಖಲಿಸಿ ಪರಿಹಾರ ಕೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಪ್ರತಿವಾದಿ 4, 5, 7, 8, 9 ರಿಂದ 11 ರವರ ಪರ ಶ್ರೀ ಯು ವಿ ಆಯ್ ವಕೀಲರಿಂದಃ**

**3.** ಬಾಡಿಗೆದಾರರ ಬಗ್ಗೆ ದಾವಾಗೆ ನೀವೇ ಮಾಹಿತಿ ಕೊಟ್ಟಿದ್ದಿರಾ ಎಂದರೆ ಸಾಕ್ಷಿ ನಾವೇ ಕೊಟ್ಟಿದ್ದೇವೆ ಎನ್ನುತ್ತಾರೆ. ನೀವು ಎಲ್ಲಾ ಬಾಡಿಗೆದಾರರಿಗೆ ಮೌಖಿಕವಾಗಿ ಹೋಗಿ ಬೇಟಿಯಾಗಿದ್ದೀರಾ ಎಂದರೆ ಸಾಕ್ಷಿ ಆಗಿದ್ದೇನೆ ಎನ್ನುತ್ತಾರೆ. ಮೊದಲ ಬಾರಿಗೆ ನೀವು ಯಾವಾಗ ನೀವು ಅವರನ್ನು ಬೇಟಿಯಾಗಿದ್ದೀರಿ ಎಂದರೆ ಸಾಕ್ಷಿ ಮೂರು ವರ್ಷಗಳ ಹಿಂದೆ ಎನ್ನುತ್ತಾರೆ. ಅಂದರೆ ದಾವಾ ಹಾಕುವ ಸಮಯದಲ್ಲಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಿಮ್ಮ ಸಮಕ್ಷಮ ಬಾಡಿಗೆ ಬಗ್ಗೆ ವ್ಯವಹಾರ ಆಗಿತ್ತಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಯಾವ ಯಾವ ಶಾಪನಲ್ಲಿ ಯಾರು ಬಾಡಿಗೆದಾರರು ಇದ್ದಾರೆಂದು ಯಾರು ಮಾಹಿತಿ ಕೊಟ್ಟರೆಂದರೆ ಸಾಕ್ಷಿ ನಾವೇ ಮಾಹಿತಿ ಕೊಟ್ಟಿರುತ್ತೇವೆ. ಶಾಪ ನಂಬರ ಎಲ್ಲಾ ಬರೆದುಕೊಂಡಿರಾ ಎಂದರೆ ಸಾಕ್ಷಿ ಹೌದು ನಮ್ಮ ಬುಕ್ಕನಲ್ಲಿವೆ ಎನ್ನುತ್ತಾರೆ. ದಾವಾಕ್ಕೆ ಬಾಡಿಗೆದಾರರನ್ನು ನಾನು ಕಳೆದ ವರ್ಷ ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದರೆ ಸಾಕ್ಷಿ ಹೌದು ಕಳೆದ ಒಂದು ವರ್ಷದ ಹಿಂದೆ ನಮಗೆ ಮಾಹಿತಿ ಸಿಕ್ಕಿತ್ತು ಅದಕ್ಕಿಂತ ಮೊದಲು ನಾವು ಅಲ್ಲಿಗೆ ಹೋಗಿಯೇ ಇಲ್ಲ ಎನ್ನುತ್ತಾರೆ. ನಿಮಗೆ ಯಾವ ಯಾವ ಬಾಡಿಗೆದಾರರು ಯಾವ ಅಂಗಡಿಗಳಲ್ಲಿದ್ದಾರೆಂದು ಸಂಪೂರ್ಣ ಮಾಹಿತಿ ಇದೆಯಾ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ. ಪ್ರತಿವಾದಿ 8 ರವರು ಅಂಗಡಿ ಸಂಖ್ಯೆ 5, 6 ರಲ್ಲಿ ಇರುತ್ತಾರೆ. ಪ್ರತಿವಾದಿ 8 ರವರು ಪೂಜಾರಿ ಬಿಲ್ಡಿಂಗನಲ್ಲಿ ಎಗ್ಗ ರೈಸ ಮಾಡುವ ಗಾಡಿ ಇಟ್ಟಿರುತ್ತಾರೆಂದರೆ ಅದು ನನಗೆ ಗೊತ್ತಿಲ್ಲ. ಪ್ರತಿವಾದಿ 8 ದಾವಾ ಆಸ್ತಿ 1 ರಲ್ಲಿ  ಬಾಡಿಗೆದಾರನಲ್ಲ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 9 ಮತ್ತು 10 ಇವರು ದಾವಾ ಆಸ್ತಿ 1 ರಲ್ಲಿ ಬಾಡಿಗೆದಾರರು ಅಲ್ಲ ಎಂದರೆ ಸಾಕ್ಷಿ ಸುಮ್ಮನೇ ನಿಲ್ಲುತ್ತಾರೆ. ಪ್ರತಿವಾದಿ 4, 5 ಮತ್ತು 7 ರವರು ಮಾತ್ರ ಬಾಡಿಗೆದಾರರು ಆ ಕಾರಣಕ್ಕಾಗಿ ಅವರ ಅಂಗಡಿಗಳ ನಂಬರಗಳನ್ನು ಮಾತ್ರ ನಾನು ನಮೂದಿಸಿರುತ್ತೇನೆಂದರೆ ಸಾಕ್ಷಿ ನಾವು ಕೊಟ್ಟಾಗ ಇದ್ದರು ಈಗ ಸ್ವಲ್ಪ ಜನ ಬಿಟ್ಟು ಹೋಗಿರುತ್ತಾರೆ ಎನ್ನುತ್ತಾರೆ. ಸದರಿ ದಾವಾದಲ್ಲಿ ಅವರನ್ನು ಪ್ರತಿವಾದಿಗಳನ್ನಾಗಿ ಸೇರಿಸಿದ್ದಕ್ಕೆ ಸದರಿಯವರು ನಿಮ್ಮ ಬಾಡಿಗೆ ಬೇಡ ಕೇಸು ಬೇಡ ಎಂದು ಬಿಟ್ಟು ಹೋಗಿರುತ್ತಾರೆಂದರೆ ಸಾಕ್ಷಿ ಹೌದು ಬಿಟ್ಟುಹೋಗಿದ್ದಾರೆ ಎನ್ನುತ್ತಾರೆ. ಈ ವಿಷಯಗಳು ಗೊತ್ತಿದ್ದೂ ಬುದ್ಯಾಪೂರ್ವಕವಾಗಿ ನಾನು ಅವರನ್ನು ಅನಾವಶ್ಯಕವಾಗಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪ್ರತಿವಾದಿ 4, 5 ಮತ್ತು 7 ರವರು ಎಷ್ಟು ಮುಂಗಡ  ಹಣ ಠೇವಣೆ ಇಟ್ಟಿರುತ್ತಾರೆಂದರೆ ಅದು ನನ್ನ ಸ್ವಂತಕ್ಕೆ ಮಾಹಿತಿ ಇಲ್ಲ

ಎನ್ನುತ್ತಾರೆ. ಪ್ರತಿವಾದಿ 4, 5 ಮತ್ತು 7 ರವರು ಇಟ್ಟಂತಹ ಠೇವಣಿಗೆ ನೀವು ವಾಪಸು ಕೊಡುವ ಜವಾಬ್ದಾರಿ ತೆಗೆದುಕೊಳ್ಳುತ್ತೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪ್ರತಿವಾದಿ 4, 5 ಮತ್ತು 7 ರವರು ರವರ 2000 ರಿಂದ ಬಾಡಿಗೆದಾರರು ಎಂದು ಹೇಳಿರುವದು ಸುಳ್ಳು ಇದೆ ಎಂದರೆ ಸಾಕ್ಷಿ ಸರಿ ಇದೆ ಎನ್ನುತ್ತಾರೆ. ಮೂರು ಬಾಡಿಗೆದಾರರು ಇದ್ದರೂ ಕೂಡಾ ಉಳಿದವರನ್ನು ಅಂದರೆ ರಸ್ತೆಯಲ್ಲಿ ಸಣ್ಣ ಪುಟ್ಟ ವ್ಯಾಪಾರ ಮಾಡುವವರನ್ನು ನಾನು ವಿನಾಃಕಾರಣ ದಾವಾದಲ್ಲಿ ಸೇರಿಸಿರುತ್ತೇನೆಂದರೆ ಸಾಕ್ಷಿ ಎಲ್ಲರೂ ಬಾಡಿಗೆದಾರರು ಎಂದು ನುಡಿಯುತ್ತಾರೆ. ಸದರಿಯವರು 2000 ರಿಂದ ಬಾಡಿಗೆದಾರರೆಂದು ಹೇಳಲು ನೀವೇನಾದರೂ ದಾಖಲೆ ನೋಡಿದ್ದೀರಾ ಎಂದರೆನನ್ನ ಬಳಿ ದಾಖಲೆ ಇಲ್ಲ ಆದರೆ ನನ್ನ ಮಾಮ ಹೇಳಿರುತ್ತಾರೆ ಎನ್ನುತ್ತಾರೆ. ಪ್ರತಿವಾದಿ 4, 5 ಮತ್ತು 7 ರವರು ಇವತ್ತಿಗೂ ಬಾಡಿಗೆ ವಸೂಲಿ ಕೊಡಬೇಕೆಂದರೆ ನಮ್ಮ ಮಾಮ ಕೂಡಾ ಇರುತ್ತಾರೆಂದರೆ ಸಾಕ್ಷಿ ಅವರು ಮರಣ ಹೊಂದಿರುತ್ತಾರೆ ಎನ್ನುತ್ತಾರೆ. ಸದರಿಯವರು ಸುಮಾರು 5-6 ವರ್ಷಗಳ ಹಿಂದೆಯೇ ಮರಣ ಹೊಂದಿರುತ್ತಾರೆ. ಸದರಿಯವರಿಗೆ ನಾಲ್ಕು ಮಂದಿ ಗಂಡು ಮಕ್ಕಳು, ಪ್ರತಿವಾದಿ 4, 5 ಮತ್ತು 7 ರವರು ಬಾಡಿಗೆ ಕೊಡುವ ಸಂದರ್ಬದಲ್ಲಿ ಆ ನಾಲ್ಕು ಮಕ್ಕಳಲ್ಲಿ ಒಬ್ಬರು ಹಾಜರಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ನಮ್ಮ ಅಣ್ಣಂದಿರೇ ತೆಗೆದುಕೊಳ್ಳುತ್ತಾರೆ ಎನ್ನುತ್ತಾರೆ. ಸದರಿ ಬಾಡಿಗೆಯನ್ನು ರಾಜು ಮೇಹರವಾಡೆ ಎನ್ನುವವರು ತೆಗೆದುಕೊಳ್ಳುತ್ತಾರೆಂದರೆ ಸಾಕ್ಷಿ ಇಲ್ಲ ನನ್ನ ಅಣ್ಣಂದಿರೇ ತೆಗೆದುಕೊಳ್ಳುತ್ತಾರೆ ಎನ್ನುತ್ತಾರೆ. ನನ್ನ ಮಾಮನ ಸಾಲ ಮುಟ್ಟಿಲ್ಲ ಎಂಬ ಕಾರಣಕ್ಕೆ ಅವರು ಬಾಡಿಗೆ ತೆಗೆದುಕೊಳ್ಳುತ್ತಿದ್ದಾರೆಂದರೆ ಸಾಕ್ಷಿ ಇಲ್ಲ ಈಗಾಗಲೇ ಅವರ ಸಾಲ ಮುಟ್ಟಿದೆ ಎನ್ನುತ್ತರೆ. ನಾನು ಬಾಡಿಗೆದಾರರೆಂದು ಸೇರಿಸಿರುವ ವ್ಯಕ್ತಿಗಳ ಮೇಲೆ ನನ್ನದು ಯಾವದೇ ಮಾಗಣಿ ಇಲ್ಲ ಎಂದರೆ ಸರಿ.

**ಪಾಟೀ ಸವಾಲು ಪ್ರತಿವಾದಿ 2 ಮತ್ತು 3 ರವರ ಪರ ವಕೀಲರು ಸಮಾಯಾವಕಾಶ ಕೋರಿದ್ದು ಸಮಯಾವಕಾಶ ನೀಡಿ ಮುಂದೂಡಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.